<u>1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು</u>

ಸಿ.ಸಿ. ನಂ. 17018-2023

ಸಿಡಬ್ಲೂ -3 ಪಿಡಬ್ಲೂ- 2

| | |
|---|---|
| ಸಾಕ್ಷಿದಾರನ ಹೆಸರು | : ರಘು ಹೆಚ್ |
| ತಂದೆಯ ಹೆಸರು | : ಹೊನ್ನುರಪ್ಪ |
| ವಯಸ್ಸು | : 24 ವರ್ಷ |
| ಕೆಲಸ | : ವ್ಯಾಪಾರ |
| ವಾಸ | : ಜಯನಗರ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 24-06-2024ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನನಗೆ ಚಾಸಾ 2 ರವರ ಪರಿಚಯ ಇರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಗೊತ್ತು. 2 ನೇ ಆರೋಪಿಯ ಪರಿಚಯ ಇರುವುದಿಲ್ಲ. ಸಾಕ್ಷಿಯು ನಿಪಿ. 1 ಮತ್ತು 2 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ. 1 ಬಿ ಮತ್ತು ನಿಪಿ. 2 ಬಿ ಎಂದು ಗುರುತಿಸಲಾಯಿತು. ದಿ. 24-03-2023 ರಂದು ಚಾಸಾ 1 ರವರು ಆನೆದಂತ ಸಿಕ್ಕಿರುವ ವಿಚಾರವಾಗಿ ಜಯನಗರದ ಅಕ್ಕ ಮಹಾದೇವಿ ವಿದ್ಯಾನವನದ ಬಳಿ ನನ್ನನ್ನು ಕರೆದಿದ್ದು, ಹೋಗಿ ನೋಡಲಾಗಿ ಅಲ್ಲಿ ಮುರಿದ ಹೋಗಿರುವ  ಆನೆದಂತಗಳು ಕಂಡು ಬಂದಿರುತ್ತವೆ. ಸಾಕ್ಷಿಯು ನಿಪಿ. 4 ಪೋಟೊದಲ್ಲಿರುವ ಆನೆದಂತಗಳನ್ನು ನೋಡಿ ಗುರುತಿಸಿರುತ್ತಾರೆ.

ಆನೆದಂತಗಳನ್ನು 1 ನೇ ಆರೋಪಿಯು ಒಂದು ಬಿಳಿಯ ದ್ವಿಚಕ್ರ ವಾಹನದಲ್ಲಿ ತೆಗೆದುಕೊಂಡು ಬಂದಿದ್ದರು, ವಾಹನ ಸಂಖ್ಯೆ ನನಗೆ ಗೊತ್ತಿಲ್ಲ. ಆನೆದಂತಗಳನ್ನು ತೆಗೆದುಕೊಂಡು ಬಂದಿದ್ದ ಆಸಾಮಿಯಾದ 1 ನೇ ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> <u>ಹಿ.ಸ.ಸಾ.ಅ. ರವರಿಂದಃ</u>

ಬಿಳಿ ಬಣ್ಣದ ದ್ವಿಚಕ್ರ ವಾಹನದ ನೊಂದಣಿ ಸಂಖ್ಯೆ ಕೆಎ 02 5 ಎಂ ಜೆ 6272 ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ. 3 ರಲ್ಲಿರುವ ದ್ವಿಚಕ್ರ ವಾಹನನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ. 3 ಮತ್ತು 4

ರಲ್ಲಿರುವ ವಸ್ತುಗಳನ್ನು  ಅಮಾನತ್ತು ಪಡಿಸಿಕೊಂಡ ಬಗ್ಗೆ ನನ್ನ ಮತ್ತು ಚಾಸಾ 2 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

(ಪಾಟೀ ಸವಾಲು 1 ನೇ ಆರೋಪಿತರ ಪರ ವಕೀಲರಿಂದಃ ಪಾಟೀ ಸವಾಲನ್ನು ಮಾಡಲು ಸಮಯಾವಕಾಶವನ್ನು ಕೋರಿರುತ್ತಾರೆ, ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು 2 ನೇ ಆರೋಪಿತರ ಪರ ವಕೀಲರಿಂದಃ ಪಾಟೀ  ಸವಾಲು ಇಲ್ಲಾ ಎಂದು ನುಡಿದಿರುತ್ತಾರೆ.)

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1  ನೇ ಅ. ಮು. ಮ. ದಂ. ನ್ಯಾ